

# ಇದು ಕಥೆಯಲ್ಲ ಜೀವನ

ವಸುಮತಿ ಉಡುಪ

‘ನಾನು ಎಲ್ಲರಂತಲ್ಲವಾ?’ – ಹೀಗೊಂದು ಪ್ರಶ್ನೆ ಆಗೀಗ ಸಂಧ್ಯಾಳನ್ನು ಕಾಡುವುದಕ್ಕೆ ಸಕಾರಣವಿದೆ. ಇಳಿಸಂಜೆಯ ವಯಸ್ಸಲ್ಲಿ ಸುಖ ಅಂದರೆ ಏನು? ‘ಮೊಮ್ಮಕ್ಕಳನ್ನು ಆಡಿಸುತ್ತಾ, ಅವರ ಆಟಪಾಠ ನೋಡಿ ಸಂಭ್ರಮಿಸುತ್ತಾ, ಕಥೆ ಗಿಥೆ ಹೇಳುತ್ತಾ’ ಇಂತಾದ್ದೊಂದು ಸಿದ್ಧ ಉತ್ತರ ಎಲ್ಲರಿಗೂ ಗೊತ್ತು. ಇದನ್ನು ಸಾರಾಸಗಟಾಗಿ ನಂಬಬೇಕಾಗಿದ್ದಿಲ್ಲವಾದರೂ ಹಾಗೆ ನಂಬಿಸಿಟ್ಟುಬಿಟ್ಟಿದೆ ರೂಢಿಗತ ನಂಬಿಕೆ. ಅದಕ್ಕೆ ವಿರುದ್ಧವಾದ ಏನನ್ನಾದರೂ ಹೇಳಿದರೆ ತಾನು ಅಪಾರ್ಥಕ್ಕೀಡಾದೇನು ಎನ್ನುವುದು ಅವಳ ಸಹಜ ಭಯ. ‘ಮಾರಾಯ್ತೀ, ಕಷ್ಟ ಆಗುತ್ತೆ ಕಣೇ. ವಯಸ್ಸಾಗ್ತಿದೆ ನಮಗೂ...’ ಎನ್ನುವ ಒಂದು ಮುತ್ತು ಪರೋಕ್ಷವಾಗಿ ಉದುರಿದರೂ ಸಾಕು, ಬೇರೆ ಏರ್ಪಾಟು ಮಾಡಿಕೊಳ್ಳುತ್ತಾಳೆ ಮಗಳು. ಅದನ್ನು ಕಲ್ಪಿಸಿಕೊಳ್ಳುವುದಕ್ಕೂ ಸಂಧ್ಯಾಳಿಗೆ ಭಯ. ಕಂಡು ಕೇಳರಿಯದ ಯಾರದೋ ಕಣ್ಣಂಕೆಯಲ್ಲಿ ಬೆಳೆಯಬೇಕಾ ತನ್ನ ಅಪರೂಪದ ಮೊಮ್ಮಗು? ನಾಲ್ಕಾರು ವರ್ಷ ಮಗುವನ್ನು ನೋಡಿಕೊಳ್ಳುವಷ್ಟು ಶಕ್ತಿ ಇಲ್ಲವಾ ತಮಗೆ? ಇದೆ ಅಂದರೆ ಇದೆ, ಇಲ್ಲ ಅಂದರೆ ಇಲ್ಲ. ಐವತ್ಮೂರು ಮಹಾ ವಯಸ್ಸೇನಲ್ಲ. ಗಂಡನಿಗೆ ಐವತ್ತಾರು. ರಿಟೈರಾಗಲು ಇನ್ನೂ ನಾಲ್ಕು ವರ್ಷ ಬಾಕಿ. ಪುಣ್ಯಾತ್ಮ, ಬೆಳಿಗ್ಗೆ ಮನೆ ಬಿಟ್ಟರೆ ವಾಪಸು ಬರುವುದು ಮೂರುಸಂಜೆಗೆ. ಅಲ್ಲಿಯವರೆಗೆ ಮನೆಯಲ್ಲಿ ಹಸುಕಂದನನ್ನು ನೋಡಿಕೊಂಡು ಏಗಬೇಕು ತಾನೊಬ್ಬಳೇ. ‘ಮಗು ನೋಡಿಕೊಳ್ಳೋಕೆ ಒಬ್ಬರನ್ನ ಹುಡುಕೋಣ. ನೀನು ಮೇಲ್ವಿಚಾರಣೆ ನೋಡಿಕೊಂಡಿದ್ದರೆ ಸಾಕು. ಒಂದು ಕಣ್ಣಿಟ್ಟಿದ್ದರೆ ಸಾಕು’ – ಸಸಾರಕ್ಕೆ ಹೇಳಿಬಿಟ್ಟಳು ಮಗಳು. ಅದು ಮತ್ತೊಂದು ರಗಳೆ ತಲೆಯ ಮೇಲೆ ಎಳೆದುಕೊಂಡಂತೆ. ಸನ್ಯಾಸಿ ಸಂಸಾರದ ಕಥೆ ಆದಂತೆ. ಅವರ ಕೈ, ಬಾಯಿ ಕಾದುಕೊಂಡಿರುವವರು ಯಾರು? ಹೊಟ್ಟೆಪಾಡಿಗೆ ದುಡಿಮೆಗೆ ಬರುವ ಎಲ್ಲರೂ ನಂಬಿಕಸ್ಥರು ಅಂದುಕೊಳ್ಳುವುದು ಹೇಗೆ? ಈಗಾದರೆ ತಾನು, ತನ್ನ ಗಂಡ. ಬೆಳಿಗ್ಗೆ ತಿಂಡಿ ಮಾಡಿದರೂ ನಡೆಯುತ್ತದೆ, ಮಾಡದಿದ್ದರೂ. ಎರಡು ಹೋಳು ಬ್ರೆಡ್ಡಿಗೆ ಬೆಣ್ಣೆ ಸವರಿ ತಿಂದರೂ ಆಯ್ತು. ಅವಲಕ್ಕಿ ನೆನೆಸಿ, ಮೊಸರು, ಸಕ್ಕರೆ ಬೆರೆಸಿ, ‘ತಿಂಡಿ ಆಯ್ತು’ ಅನಿಸಿದರೂ ಸಾಕು. ಮನೆಯಲ್ಲಿ ಮತ್ತೊಬ್ಬರಿದ್ದರೆ ಅವರ ಅಗತ್ಯಗಳನ್ನೂ ಪೂರೈಸಬೇಕಾದ ಅನಿವಾರ್ಯ. ಈಗಾಗಲೇ ಕಸಮುಸುರೆಗೆ ಬರುವವಳ ಜೊತೆ ಮತ್ತೊಬ್ಬಳು. ಎಷ್ಟೋ ಕಥೆ ಕೇಳಿದ್ದಾಳೆ ಸಂಧ್ಯಾ. ಮಗುವಿಗೆ ಕೊಡಬೇಕಾದ ಹಣ್ಣು, ಹಾಲನ್ನು ತಾವೇ ಗುಳುಂಕರಿಸಿ ಕೆಲಸ ಕಮ್ಮಿ ಮಾಡಿಕೊಂಡವರ ಕಥೆ. ಊಟ ಮಾಡಿಸುವ ತಾಳ್ಮೆ ಇಲ್ಲದೆ ಮೋರಿಗೆ ಚೆಲ್ಲಿದವರ ಕಥೆ. ಯಾರದೋ ಮನೆಯ ಮಕ್ಕಳ ಮೇಲೆ ಮತ್ಯಾರಿಗೋ ಪ್ರೀತಿ ಇರುವುದು, ಬರುವುದು ಸುಲಭವೇನಲ್ಲ. ಅದಕ್ಕೂ ಇರಬೇಕು ಮಾತೃಹೃದಯ. ಎಲ್ಲರ ಮೇಲೂ ಸಾರಾಸಗಟಾಗಿ ಸಂಶಯಪಡುವುದು